# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 12.10.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಆಪ್ಟಿಕ್ ಕೇಬಲ್ ಸಂಸ್ಥೆಯವರಿಗೆ ಕಾಲಾವಕಾಶ ನೀಡಿ, ನಗರದಲ್ಲಿ ಪ್ರತಿಯೊಂದು ಸಂಸ್ಥೆಯಿಂದ ಎಷ್ಟು ಉದ್ದದ ಓಎಫ್‌ಸಿ ಕೇಬಲ್‌ಗಳನ್ನು ಅಳವಡಿಸಲಾಗಿದೆ ಎಂಬ ವಿವರಗಳನ್ನು ಘೋಷಿಸಲು ಸೂಚಿಸಲಾಗಿತ್ತು. ಆದರೆ ಈ ಸಂಸ್ಥೆಗಳು ಘೋಷಣೆ ಮಾಡಿ ಕೇವಲ 4,717 ಕಿ.ಮೀ.ನಷ್ಟು ಉದ್ದದ ಓಎಫ್‌ಸಿ ಕೇಬಲ್ ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿರುತ್ತಾರೆ.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಇಂದಿನಿಂದ ಓ.ಟಿ.ಡಿ.ಆರ್ ಯಂತ್ರವನ್ನು ಬಳಸಿ ಸದರಿ ಸಂಸ್ಥೆಗಳಿಂದ ಅನಧಿಕೃತವಾಗಿ ಅಳವಡಿಸಲಾಗಿದ್ದ ಕೇಬಲ್‌ಗಳನ್ನು ಗುರುತಿಸಿ ಮತ್ತು ಅವುಗಳನ್ನು Disconnect ಮಾಡುವ ಕಾರ್ಯ ಇಂದಿನಿಂದ ಹಮ್ಮಿಕೊಳ್ಳಲಾಗಿದೆ. ಇಂದು (ವಾರ್ಡ್ ನಂ.11) ಅಬ್ಬಿಗೆರೆ ಪ್ರದೇಶದಲ್ಲಿ 15 ಕಿ.ಮೀ.ನಷ್ಟು ಉದ್ದದ ಕೇಬಲ್ ಅನಧಿಕೃತವಾಗಿ ಅಳವಡಿಸಿರುವುದನ್ನು ಪತ್ತೆ ಹಚ್ಚಲಾಗಿದೆ. ಪೂಜ್ಯ ಮಹಾಪೌರರು ಇಂದು ಈ ಅನಧಿಕೃತ ಕೇಬಲ್‌ಗಳನ್ನು Disconnect ಮಾಡುವುದರ ಮೂಲಕ ಈ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಇಂದಿನಿಂದ ನಗರಾದ್ಯಂತ ಅನಧಿಕೃತವಾಗಿ ಅಳವಡಿಸಲಾದ OFC cable disconnect ಮಾಡುವ ಕಾರ್ಯ ಮುಂದುವರೆಯುವುದು.

ಈ ಸಂದರ್ಭದಲ್ಲಿ ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ಹಾಗೂ ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ ರವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**